ಸೀಮಂತಿನಿ ದೇಸಾಯಿ, ಬೆಂಗಳೂರು

ಇಸ್ರೋ ವಿಜ್ಞಾನಿಗಳು ಗಣೇಶ ಚತುರ್ಥಿಯಂದು ಚಂದ್ರನನ್ನು ತಲೆಯೆತ್ತಿ ನೋಡುವರೆ?



ಊಹೂಂ. ಅವರು ಆಕಾಶವನ್ನೂ ತಲೆತಗ್ಗಿಸಿಯೇ ನೋಡುವುದು – ಕಂಪ್ಯೂಟರ್ ಸ್ಕ್ರೀನಿನಲ್ಲಿ.

ಪಿ. ಜಯವಂತ ಪೈ, ಕುಂದಾಪುರ

ವಿದ್ಯಾವಂತರಲ್ಲೇ ವಿಚ್ಛೇದನ ಜಾಸ್ತಿ. ಏಕೆ?

ವಿವಾಹ ಒಂದು ಅಹಂಕಾರವನ್ನೇ ತಡೆಯುವುದು ಕಷ್ಟ. ಇಲ್ಲಿ ಎರಡಿರುತ್ತವಲ್ಲ.

ಟಿ.ಎಸ್. ಪ್ರತಿಭಾ, ಚಿತ್ರದುರ್ಗ

ಕಾಫಿ, ಟೀ ಮಿಕ್ಸ್ ಮಾಡಿಕೊಂಡು ಕುಡಿಯುವ ಟ್ರೆಂಡ್ ಜಾಸ್ತಿ ಆಗಿದೆಯಲ್ಲ ರಾಮ್?

ಉಭಯಬಣಗಳಿಗೂ ಮಂಚಿವಾಡು ಆಗಬೇಕೆನ್ನುವ ಸಮ್ಮಿಶ್ರಬುದ್ಧಿ.

ವಿ. ಹೇಮಂತಕುಮಾರ್, ಬೆಂಗಳೂರು

ಕೆಲವರು ಬಹಳ ಸಮಯ ಮಾತಾಡ್ತಾನೇ ಇರ್ತಾರೆ; ನಿಲ್ಲಿಸೋದೇ ಇಲ್ಲ. ಏಕೆ?



ಅವರದು ಪೆಂಡುಲಂ ನಾಲಿಗೆಯಂತೆ; ಸ್ವಸ್ಥಿತಿಗೆ ಬರಲು ಹೆಚ್ಚು ಸಮಯ ಬೇಕು.

ಎಸ್.ಸಿ. ರಮೇಶ್, ಮೈಸೂರು

'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' ಎಂಬುದು ಈಗ ಎಷ್ಟು ಪ್ರಸ್ತುತ?

ಕೊಂಚ ಬದಲಾಯಿಸಿಕೊಳ್ಳಿ; ಸಂವೇದ ಸುಳ್ಳಾದರೂ ತಗಾದೆ ಸುಳ್ಳಾಗದು.

ಅನಂತಪದ್ಮನಾಭ ಎಚ್.ಎಂ., ಮೈಸೂರು

ಚಾಂಚಲ್ಯ ಮತ್ತು ಚಾಪಲ್ಯಗಳು ಲಿಂಗಾತೀತವೋ, ಲಿಂಗಸಹಿತವೋ?

'ಚಾ'ರ್ವಲಿಂಗಿಗಳ ಅಧರಕ್ಕೂ ಆದರಣೀಯವಾದ್ದರಿಂದ ಚಾಗೆ ಸೇರಿದ ಇವೂ ಲಿಂಗಾತೀತ.

ಜೀವಿ, ಗೊಂಡೇದಹಳ್ಳಿ

ಆರಂಕಿ ಸಂಬಳದಲ್ಲಿ ಅರ್ಧಾಂಗಿಯನ್ನು ಅರಗಿಣಿಯಂತೆ ನೋಡಿಕೊಂಡರೂ ಆಕೆಗೆ ಸಮಾಧಾನವಿಲ್ಲವಲ್ಲ?

ಅವಳಿಗೆ ಸ್ವತಂತ್ರವಾಗಿ ಓಡಾಡಲು ಬಿಡಿ. ಅರಗಿಳಿಗೆ ಬಂಧನವೇ ಶಾಪ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ

ಈ ಪೃಥ್ವಿಯ ಮೇಲೆ ನೀರೇ ಇಲ್ಲವಾದರೆ ಏನಾಗಬಹುದು?

ಮೋಡಗಳಲ್ಲಿ ಮನೆ ಮಾಡಿಕೊಳ್ಳಬೇಕಾಗುವುದು.

ಕಾವ್ಯಶ್ರೀ ಪತ್ರಿಮಠ, ಸುರಪುರ

ಅಂತರಂಗ, ಬಹಿರಂಗ ಒಂದಾಗುವುದು ಯಾವಾಗ?

ಅಂತರ ಇಲ್ಲವಾದಾಗ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

ಚಿಕ್ಕಮಕ್ಕಳ ಮನಸ್ಸು ಚೊಕ್ಕವಾಗಿರುತ್ತೆ. ದೊಡ್ಡವರ ಮನಸ್ಸು?

ಚಿಕ್ಕದಾಗಿರುತ್ತೆ.

ಆರ್. ಮಧುಸೂದನ್, ಹಾಸನ

'ಕನಸು ದೊಡ್ಡದಾಗಿರಬೇಕು' ಎಂದರು ಸಾಧಕರು; 'ಆಸೆಯೇ ದುಃಖಕ್ಕೆ ಮೂಲ'ವೆಂದರು ಜ್ಞಾನಿಗಳು. ಯಾವುದು ಸರಿ?

ಕನಸು ಸಮಾಜಮುಖಿಯಾಗಿದ್ದರೆ ಅದು ಆಸೆಯಲ್ಲ, ಸಾಧನಾಪಥವೆಂದರು ವಿವೇಕಿಗಳು.

ಭಾರತೀ ಗಂಗಾಧರ್, ಬೆಂಗಳೂರು

ಬೆಂಗಳೂರಿನಲ್ಲಿರುವ ಕಾರುಗಳ ಸಂಖ್ಯೆ ಹೇಳದಿದ್ದರೆ ತಲೆ ಸಾವಿರ ಹೋಳಂತೆ; ತಲೆ ಉಳಿಸಿ?

ಮನೆಗಳ ಸಂಖ್ಯೆಯನ್ನು 3ರಿಂದ ಗುಣಿಸಿ, 2ರಿಂದ ಭಾಗಿಸಿ ವರ್ತಕರ ಸಂಖ್ಯೆ ಕೂಡಿದರೆ ಎಷ್ಟೋ ಅಷ್ಟು.

ವಿ. ಮಾಧವ ಶ್ಯಾನುಭಾಗ, ಕುಂದಾಪುರ

ನನ್ನತ್ತೆ ಮಾವಂದಿರಿಗಿಂತ ನಿನ್ನತ್ತೆ ಮಾವಂದಿರು ಒಳ್ಳೆಯವರೆಂದರೆ, ಹಾಗೆನ್ನಿ ಮತ್ತೆ ಎಂದಳಲ್ಲ?

ಆಕೆ ಸೋದರಮಾವ, ಸೋದರತ್ತೆಯ ಬಗ್ಗೆ ಎಂದುಕೊಂಡಿದ್ದಂತೆ.

## ಬಹುಮಾನಿತ ಪ್ರಶ್ನೆ

ಅನಸೂಯ ಟಿ., ಕೇದಿಗೆಮನೆ

ಮೊಬೈಲಲ್ಲಿ ನಿತ್ಯ ಸ್ಟೇಟಸ್ ಹಾಕುವವರ ಸ್ಟೇಟಸ್ ಹೆಚ್ಚುತ್ತದೆಯೇ ಗುರುವೇ?

ಊಹೂಂ. ಆದರೆ ಇವರ ಮೆಂಟಲ್ ಸ್ಟೇಟಸ್ ಬಹಿರಂಗವಾಗುತ್ತದೆ.

ಬಿ. ಚಂದ್ರೇಗೌಡ, ಬೆಂಗಳೂರು

ನೀರಿನ ಸುಳಿಗೂ, ಸಂಸಾರದ ಸುಳಿಗೂ ಏನು ವ್ಯತ್ಯಾಸ?

ಸಂಸಾರದ ಸುಳಿ ಸುಳಿವು ಕೊಡುವುದಿಲ್ಲ.

ಜಗದೀಶ ಬಿ. ಹೊಸೂರು, ಮೈಸೂರು

ವೋಟು ನೀಡಲು ನೋಟು ಪಡೆದವರು ಅದರಿಂದ ಏನೆಲ್ಲ ಖರೀದಿಸಿರಬಹುದು?

ಕರಾಳ ಭವಿಷ್ಯವನ್ನು.

ಸುಧೀಂದ್ರ, ಬೆಂಗಳೂರು

ಪಕ್ಕದ್ಮನೆ ನಾಯಿಗಳು ಹಗಲಿಡೀ ನಿದ್ರಿಸಿ ರಾತ್ರಿಯೆಲ್ಲ ಬೊಗಳುತ್ತವಲ್ಲ?



ಹೋದ ಜನ್ಮದಲ್ಲಿ ಬಿಪಿಓ ನೌಕರರಾಗಿದ್ದವಂತೆ; ಇಂದಿಗೂ ಅದೇ ಚಾಳಿ!

ಬೂಕನಕೆರೆ ವಿಜೇಂದ್ರ, ಮೈಸೂರು

ಸಾಯುವಾಗ ವ್ಯಕ್ತಿ ಸುಳ್ಳು ಹೇಳುವುದಿಲ್ಲವಂತೆ?

ಹೌದು. ಸುಳ್ಳನ್ನು ಸೃಷ್ಟಿಸುವ ಶಕ್ತಿ ಇರುವುದಿಲ್ಲ.

ಎಂ.ಎ. ಕುಮಾರ್, ಬೆಂಗಳೂರು

ಅಜ್ಜ–ತಾತ. ಅಜ್ಜಿ?

ರಿನ್ಯೂಡ್ ಆಂಟಿ.

ಶ್ರುತಿ ರಿಗ್ರೆಟ್ ಅಯ್ಯರ್, ಅಮೆರಿಕ

ಗಾಳಿಮಾತಿಗೂ, ಸೋಷಿಯಲ್ ಮೀಡಿಯಾ ಸುದ್ದಿಗೂ ಏನು ವ್ಯತ್ಯಾಸ?

ಸೋಷಿಯಲ್ ಮೀಡಿಯಾದು ಬಾಹ್ಯದ ಅಬ್ಬರ; ಗಾಳಿಮಾತು ಆಂತರಿಕ ಉಬ್ಬರ.

■ ರಾಮ್